

# ಪಡೆಯದ ಪ್ರಶಸ್ತಿ!

ಎಷ್ಟೊಂದು ಅಭಿನಾನಿಗಳು?! ಬಾಲಿವುಡ್ ಬಾದ್ ಷಾ, ಕಿಂಗ್ ಖಾನ್ ಶಾರುಖ್ ಖಾನ್ ಎಂದರೆ ಸಿನಿಮಾ ಪ್ರಿಯರಲ್ಲಿ ಅದೊಂದು ಪುಳಕ. ಖಾನ್ ತ್ರಯರ ಪೈಕಿ ಅಭಿಮಾನಿಗಳ ಮನಸಿನಲ್ಲಿ ಶಾರುಖ್‌ಗೆ ವಿಶಿಷ್ಟ ಸ್ಥಾನ. ಅತ್ಯುತ್ತಮ ನಟನೆಗಾಗಿ ಎಂಟು ಫಿಲಂ ಫೇರ್ ಪ್ರಶಸ್ತಿಗಳು, ಲೆಕ್ಕವಿಲ್ಲದಷ್ಟು ಗೌರವಗಳು. ಇಷ್ಟೆಲ್ಲಾ ಸಾಧನೆ ಮಾಡಿದರೂ ಶಾರುಖ್ ಮನೆಯ ಷೋಕೇಸ್ ಅಪೂರ್ಣವೆನಿಸುತ್ತದೆ. ಏಕೆಂದರೆ ಅಲ್ಲಿ ದೇಶದ ಅತ್ಯುನ್ನತ ಪ್ರಶಸ್ತಿಯೇ ಕಾಣಿಸುತ್ತಿಲ್ಲ. ನಿಜ. ಚಿತ್ರರಂಗಕ್ಕೆ ಕಾಲಿಟ್ಟು ಎರಡೂವರೆ ದಶಕವೇ ಕಳೆದರೂ, ಜನಪ್ರಿಯ ಹಿಟ್ ಸಿನಿಮಾಗಳಲ್ಲಿ ನಟಿಸಿದ್ದರೂ, ಶಾರುಖ್‌ಗೆ ಇನ್ನೂ ರಾಷ್ಟ್ರ ಪ್ರಶಸ್ತಿ ಒಲಿದು ಬಂದಿಲ್ಲ. ಈ ಕೊರಗು ಆತನಲ್ಲಿಯೂ ಇದೆಯೇ? ಹೌದು ಎನ್ನುವುದು ಆತನ ದನಿಯಲ್ಲಿಯೇ ಸ್ಪಷ್ಟವಾಗುತ್ತದೆ. ಹಾಗೆಯೇ ತಾನು ನಟನೆಗಾಗಿ ರಾಷ್ಟ್ರ ಪ್ರಶಸ್ತಿ ಪಡೆದುಕೊಳ್ಳುವ ಗುಣಮಟ್ಟದ ಸಿನಿಮಾ ನೀಡಿಲ್ಲ ಎಂಬ ಆತ್ಮಾವಲೋಕನ ಮಾಡಿಕೊಂಡಿದ್ದಾನೆ.

'ಚಕ್ ದೆ ಇಂಡಿಯಾ', 'ಸ್ವದೇಸ್' ಚಿತ್ರಗಳ ಅಭಿನಯಕ್ಕಾಗಿ ಶಾರುಖ್‌ಗೆ ರಾಷ್ಟ್ರ ಪ್ರಶಸ್ತಿ ಬರುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಬೆರಳಣಿಕೆಯ ಚಿತ್ರಗಳ ಹೊರತಾಗಿ ಶಾರುಖ್, ಮನರಂಜನೆ ಪ್ರಧಾನ ಚಿತ್ರಗಳಲ್ಲಿ ನಟಿಸಿರುವುದೇ ಹೊರತು, ಪ್ರಯೋಗಾತ್ಮಕ ಚಿತ್ರಗಳಲ್ಲಿ ಕಾಣಿಸಿಕೊಂಡಿಲ್ಲ. ಪ್ರಶಸ್ತಿ ಪಟ್ಟಿಯಲ್ಲಿ ಒಮ್ಮೆಯೂ ಆತನ ಹೆಸರು ಕಾಣಿಸಿಕೊಳ್ಳದಿರಲು ಇದು ಸಹ ಮುಖ್ಯ ಕಾರಣ.

'ನನಗೆ ಪ್ರಶಸ್ತಿ ಸಿಕ್ಕಿಲ್ಲ ಎಂದರೆ ನಾನು ಅದಕ್ಕೆ ಅರ್ಹನಾಗಿಲ್ಲ ಎಂದರ್ಥ. ನನ್ನ ಇದುವರೆಗಿನ ಯಾವ ನಟನೆಯೂ ರಾಷ್ಟ್ರ ಪ್ರಶಸ್ತಿಯನ್ನು ಪಡೆಯುವ ಯೋಗ್ಯತೆ ಹೊಂದಿಲ್ಲ. ಈ ಕಾರಣದಿಂದಾಗಿಯೇ ಪ್ರಶಸ್ತಿ ದೊರೆತಿಲ್ಲ ಎನ್ನುವುದು ನನ್ನ ಭಾವನೆ' ಎಂದಿದ್ದಾನೆ ಶಾರುಖ್. ಆತ ನಿಸ್ಸಂಶಯವಾಗಿ ದೇಶದ ಅತ್ಯುನ್ನತ ಪ್ರಶಸ್ತಿಗೆ ಅರ್ಹ ನಟ. ಆ ಕನಸನ್ನು ಸಾಕಾರಗೊಳಿಸಲು ಅಂತಹ ವಿಶಿಷ್ಟ ಸಿನಿಮಾ ಕೂಡ ಮುಖ್ಯ.

51ರ ಹರೆಯದಲ್ಲೂ ಶಾರುಖ್, ಅಭಿಮಾನಿಗಳನ್ನು ರಂಜಿಸುವ ಕಥೆಗಳಿಗಷ್ಟೇ ಜೋತು ಬೀಳುತ್ತಿದ್ದಾನೆ. ಅದಕ್ಕೆ ಅಪವಾದ ಎಂಬಂತೆ ಇತ್ತೀಚೆಗೆ 'ಡಿಯರ್ ಜಿಂದಗಿ'ಯಲ್ಲಿ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾನೆ. ಆದರೆ, ಅದಕ್ಕೂ ಮೀರಿದ ಪಾತ್ರಗಳು ಬೇಕಲ್ಲವೇ? ಶಾರುಖ್‌ನ ಮನೆಯ ಷೋಕೇಸ್‌ನಲ್ಲಿ ರಾಷ್ಟ್ರ ಪ್ರಶಸ್ತಿಯ ಫಲಕವೂ ಕಾಣಿಸುವಂತಾಗಲಿ.

# ಸಾಕ್ಷಿ ಎಂಬ ಕೌತುಕ

ಹಿಂದಿ ಧಾರಾವಾಹಿ ಪ್ರಿಯರಿಗೆ ಈಕೆ ಚಿರಪರಿಚಿತೆ. 'ಕಹಾನಿ ಘರ್ ಘರ್ ಕಿ' ಧಾರಾವಾಹಿಯಲ್ಲಿನ ಸೊಸೆ, ಈಗ ಸಿನಿಮಾ ಪ್ರಿಯರಿಗೂ ಹತ್ತಿರ. ಅಮೀರ್ ಖಾನ್‌ನ 'ದಂಗಲ್' ಚಿತ್ರದಲ್ಲಿ ಪತ್ನಿ ಮತ್ತು ತಾಯಿಯ ಪಾತ್ರದಲ್ಲಿ ಕಾಣಿಸಿಕೊಂಡಿರುವ ಸಾಕ್ಷಿ ತನ್ವಾರ್, ಚಿತ್ರಕ್ಕೆ ಆಯ್ಕೆಯಾದ ಕಥೆಯೂ ಕುತೂಹಲಕಾರಿ. ಅಮೀರ್‌ಳ ಅಮ್ಮ 'ಕಹಾನಿ...' ಧಾರಾವಾಹಿಯ ಅಭಿಮಾನಿ. ಮಗನ ಮುಂದಿನ ಚಿತ್ರದಲ್ಲಿ ಈಕೆ ನಟಿಸಬೇಕು ಎನ್ನುವುದು ಅಮ್ಮನ ಒತ್ತಾಸೆಯೂ ಆಗಿತ್ತು. ಸಾಕ್ಷಿಯನ್ನು ಆಯ್ಕೆ ಮಾಡಿಕೊಳ್ಳಲು ಒತ್ತಡವನ್ನೂ ಹಾಕಿದ್ದರಂತೆ.

ಚಿತ್ರತಂಡದಿಂದ 'ಆಡಿಷನ್'ಗೆ ಕರೆ ಬಂದಾಗ ಸಾಕ್ಷಿ ಆರಂಭದಲ್ಲಿ ನಿರ್ಲಕ್ಷಿಸಿದ್ದಳು. ಇದು ಹುಸಿ ಕರೆ ಎಂದೇ ಆಕೆ ಭಾವಿಸಿದ್ದಳಂತೆ. ಕೊನೆಗೆ ಕರೆ ಮಾಡಿದವರು ಇದು ನಿಜ ಎಂದು ಮನವರಿಕೆ ಮಾಡಿದ್ದರು. ಅವಕಾಶ ಸಿಗಬಹುದು ಎಂಬ ಸಣ್ಣ ಭರವಸೆಯೊಂದಿಗೆ 'ಆಡಿಷನ್' ನೀಡಿದ್ದ ಆಕೆ ಕೆಲ ದಿನ ಕಾಯುತ್ತಾ ಕೂರಬೇಕಾಗಿತ್ತು. ಬಳಿಕ ತಮ್ಮ ಕಚೇರಿಗೆ ಕರೆಯಿಸಿದ ಅಮೀರ್, ಮತ್ತೊಂದು ಸುತ್ತಿನ 'ಆಡಿಷನ್' ನಡೆಸಿದ್ದೂ ಆಯಿತು. ಧಾರಾವಾಹಿ ನಡುವೆ ನಟಿಸಲು ಸಮಯ ಸಿಗುತ್ತದೆಯೇ ಎಂಬಂತಹ ಪ್ರಶ್ನೆಗಳನ್ನೂ ಆಕೆ ಎದುರಿಸಿದಳಂತೆ. ಹೀಗೆ ಆಡಿಷನ್ ಮುಗಿಸಿ ಮನೆ ತಲುಪುವ ಮೊದಲೇ ಅಮೀರ್ ಖಾನ್‌ನಿಂದ 'ದಂಗಲ್‌ಗೆ ಸ್ವಾಗತ' ಎಂಬ ಸಂದೇಶ ಬಂದಿತ್ತು. ಆಡಿಷನ್ ನಡೆಸಿ ಆಯ್ಕೆ ಮಾಡಿದ್ದರೂ, ತಾನು ಮೂಲತಃ ಅಮೀರ್ ತಾಯಿಯ ಆಯ್ಕೆ ಎಂದು ಖುಷಿಯಿಂದ ಹೇಳಿಕೊಂಡಿದ್ದಾಳೆ ಸಾಕ್ಷಿ.

ಸಾಕ್ಷಿ ಜತೆಗೆ ತೆರೆ ಹಂಚಿಕೊಂಡದ್ದು ಅಮೀರ್‌ಗೆ ವಿಶಿಷ್ಟ ಅನುಭವ ನೀಡಿದೆ. ಹೋದಲ್ಲೆಲ್ಲಾ ಆಕೆಯ ಕುರಿತೇ ಹೆಚ್ಚು ಮಾತನಾಡುತ್ತಿದ್ದಾನೆ. ಹರಿಯಾಣ ಶೈಲಿಯಲ್ಲಿ ಸಾಕ್ಷಿ ಹಿಂದಿ ಉಚ್ಚರಿಸುವುದು ಜನಪ್ರಿಯವಾಗಿತ್ತು. ಈಗ ಅದೇ ಸಾಕ್ಷಿಯ ಅಭಿನಯದ ಬಗ್ಗೆ ಜನ ಮಾತನಾಡುತ್ತಿದ್ದಾರೆ. ನಿರ್ದೇಶಕ ನಿತೇಶ್ ತಿವಾರಿ ಕೂಡ ಆಕೆಯ ಅಭಿನಯ ಕಂಡು ದಂಗಾದರಂತೆ. 'ದಂಗಲ್' ಬೆನ್ನಲ್ಲೇ ಆಕೆಗೆ ಅವಕಾಶಗಳು ಬರಲಾರಂಭಿಸಿವೆ. ಆದರೆ 'ಧಾರಾವಾಹಿಗಳಿಂದ ಹೊರಬರುವ ಬಯಕೆ ಇಲ್ಲ' ಎಂದು ಆಕೆ ಹೇಳಿಕೊಂಡಿದ್ದಾಳೆ.

